ವಾರದ ಪತ್ರ

## ಜಾನಪದ ಸಂಕ್ರಾಂತಿ

ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಜಾನಪದ ಮೂಲತಃ ಪರಂಪರಾನುಗತವಾಗಿ ಬಂದ ಸರಳತೆ ಹಾಗೂ ಸ್ಪಷ್ಟತೆಯ ಜ್ಞಾನ. ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಒಂದು ಭಾಗವಾದ ಜನಪದ ಗೀತೆಗಳ ಕಾರ್ಯಕ್ರಮ 'ಜಾನಪದ ಸಂಕ್ರಾಂತಿ' ಕಾರ್ಯಕ್ರಮ ಝೀ ಕನ್ನಡದಲ್ಲಿ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಮೂಡಿ ಬಂತು. ಅದರಲ್ಲಿ ಜನಪದ ವಾದ್ಯಗಳ ಪರಿಚಯ ಮಾಡಿಕೊಟ್ಟಿದ್ದು ಹೊಸ ತಲೆಮಾರಿಗೆ ಕೊಟ್ಟ ಉಡುಗೊರೆಯೇ ಸರಿ.

1934ರಲ್ಲಿ ಜಿ.ಪಿ. ರಾಜರತ್ನಂ ಬರೆದ 'ರತ್ನನ ಪದ'ಗಳನ್ನು ಹಾಡಿದ ಶ್ರೀಹರ್ಷ, ಮೈಸೂರು ಅನಂತಸ್ವಾಮಿ ಅವರನ್ನು ಸ್ಮರಣೆಗೆ ತಂದರು. ವಿವಿಧ ಪ್ರಕಾರದ ಜನಪದ ಗೀತೆಗಳ ಸುತ್ತುಗಳನ್ನು ಈ ಕಾರ್ಯಕ್ರಮದಲ್ಲಿ ಮಾಡಿದರೆ ಯುವಕರಿಗೆ ಅದರ ಪರಿಚಯವಾಗುತ್ತದೆ.

—ವೀಣಾ ಶಂಕರ್

## ಕನ್ಯಾದಾನ



ಉದಯ ಟೀವಿಯಲ್ಲಿ ಬರುತ್ತಿರುವ 'ಕನ್ಯಾದಾನ' ವಿಭಿನ್ನ ಕಥಾಹಂದರವುಳ್ಳ ಧಾರಾವಾಹಿಯಾಗಿದೆ. ಸಂಬಂಧ, ಪ್ರೀತಿಯ ಅರ್ಥ ತಿಳಿಸುತ್ತ ಉತ್ತಮವಾಗಿ ಮೂಡಿಬರುತ್ತಿದೆ. ಮೈಕೊ ಮಂಜು ಅವರ ಅಭಿನಯ ಸಹಜವಾಗಿದೆ. ಹೀಗೆ ಮುಂದೆಯೂ ಕೂಡ ಪ್ರಸಾರವಾಗಲೆಂದು ಆಶಿಸುತ್ತೇವೆ.

—ಸೌಜನ್ಯ ಬಿ., ಬೆಂಗಳೂರು

## ಲವಲವಿಕೆಯ 'ಗೋಲ್ಡನ್'

ಝೀ ಕನ್ನಡದ 'ಗೋಲ್ಡನ್ ಗ್ಯಾಂಗ್' ಕಾರ್ಯಕ್ರಮ ವಿಭಿನ್ನತೆಯಿಂದ ಕೂಡಿದೆ. ಕಳೆದ ಒಂದು ಸರಣಿಯಲ್ಲಿ ತರುಣ್ ಸುಧೀರ್, ಶರಣ್ ಹಾಗೂ ನೆನಪಿರಲಿ ಪ್ರೇಮ್ ಅವರ ನಡುವಿನ ಸ್ನೇಹ–ಕಷ್ಟಸುಖಗಳ ಬಗೆಗಿನ ಹರಟೆ ನಗುವಿನೊಂದಿಗೆ ಒಂದು ರೀತಿಯ ಮುದ ನೀಡಿತು.

ತರುಣ್ ಸುಧೀರ್ ಅವರ ತಾಯಿ ಅವರಂತೂ ತಾವೇ ತಯಾರಿಸಿದ ಆಹಾರದ ಕೈ ತುತ್ತು ತಿನ್ನಿಸಿ ಸಂಭ್ರಮಿಸಿದರು. ಅಲ್ಲದೆ ತಮ್ಮ ಮಗನ ಮದುವೆಯನ್ನು ಇನ್ನೂ ತಡ ಮಾಡದೆ, ಅವನ ವೈವಾಹಿಕ ಜೀವನವನ್ನು ಕಣ್ತುಂಬಿಕೊಳ್ಳುವ ಹಂಬಲವನ್ನು ವ್ಯಕ್ತಪಡಿಸಿದ ರೀತಿ ಎಂಥವರ ಕಣ್ಣಂಚಿನಲ್ಲೂ ನೀರು ತರಿಸುವಂತೆ ಇತ್ತು. ಹೆತ್ತವರು ಬಯಸುವುದು ತಮ್ಮ ಮಕ್ಕಳ ಜೀವನ ಸುಖಮಯವಾಗಿರಲಿ ಎಂದು. ಗೋಲ್ಡನ್ ಗಣೇಶ್ ಅವರ ನಿರೂಪಣೆ ಲವಲವಿಕೆಯಿಂದಲೇ ಕೂಡಿದೆ.

—ಟಿ.ಎಸ್. ಪ್ರತಿಭಾ ಚಿತ್ರದುರ್ಗ

## ಉತ್ತಮ ಸಂದರ್ಶನ

ಚಂದನದಲ್ಲಿ ಮನೋ ವೈದ್ಯ ಸಿ.ಆರ್. ಚಂದ್ರಶೇಖರ್ ಅವರ ಸಂದರ್ಶನ ಅಮೋಘವಾಗಿತ್ತು. ಅವರ ವಿಶಿಷ್ಟ ಅನುಭವಗಳ ಪರಿಚಯ ಜೀವನಮಟ್ಟ ಸುಧಾರಣೆಯ ನುಡಿಯಾಗಿದೆ. ಅರಿವಿನ ಜೀವನ ಸಂತೋಷ ಉಂಟು ಮಾಡುತ್ತದೆ ಎಂದು ಅವರ ವಿಶಿಷ್ಟ ಲೇಖನಗಳನ್ನು ಓದಿದಾಗ ಅರಿವಾಗುತದೆ. ಅವರಿಂದ ಜೀವನಪಾಠ ಕಲಿತ ಧನ್ಯತೆ ನನ್ನದು.

—ಕಮಲಾದೇವಿ ರಾಜಶೇಖರ ಹಳೂರ್, ಬೆಂಗಳೂರು

## ಧಾರಾವಾಹಿ ಮತ್ತು ಆದರ್ಶವಾದಿಗಳು

ಕನ್ನಡ ಧಾರಾವಾಹಿಗಳಲ್ಲಿ ಆದರ್ಶ ಪಾತ್ರಗಳ ಟ್ರೆಂಡ್ ಆರಂಭವಾಗಿದೆ. 'ಅಗ್ನಿಸಾಕ್ಷಿ'ಯಲ್ಲಿ ಸನ್ನಿಧಿ, 'ಮಗಳು ಜಾನಕಿ'ಯಲ್ಲಿ ಜಾನಕಿ, 'ಮಂಗಳಗೌರಿ'ಯಲ್ಲಿ ಮಂಗಳಗೌರಿ, 'ಕನ್ನಡತಿ'ಯಲ್ಲಿ ಭುವಿ, 'ದೊರೆಸಾನಿ'ಯಲ್ಲಿ ದೀಪಿಕಾ ಪಾತ್ರಗಳಲ್ಲಿ ಮುಂದುವರೆದಿದೆ. ಆದರ್ಶ ಮತ್ತು ತ್ಯಾಗ ಬದುಕಿನಲ್ಲಿ ಅನಿವಾರ್ಯ. ಕುಟುಂಬದಲ್ಲಿ ವೈಷಮ್ಯಗಳನ್ನು ನಿಭಾಯಿಸುವ ಅತಿ ತ್ಯಾಗ ಮತ್ತು ಅದರ್ಶಗಳು ಹಲವು ಬಾರಿ ಕಿರಿಕಿರಿ ಮತ್ತು ಮುಜುಗರವನ್ನು ಹುಟ್ಟಿಸುತ್ತದೆ.

—ರಮಾನಂದ ಶರ್ಮಾ, ನವದೆಹಲಿ

## ದಾಸೋಹ ಉಚಿತವೇ?

ಸ್ಟಾರ್ ಸುವರ್ಣ 'ಬೊಂಬಾಟ್ ಭೋಜನ' ನಿರೂಪಕ ಸಿಹಿ–ಕಹಿ ಚಂದ್ರು ಇತ್ತೀಚಿಗೆ ಧಾರವಾಡದ ಬಸವೇಶ್ವರ ಖಾನಾವಳಿಗೆ ಭೇಟಿ ನೀಡಿದ್ದರು. ಉತ್ತರ ಕರ್ನಾಟಕದ ಭೋಜನ ಸವಿದ ನಂತರ ಹೋಟೆಲ್ ಮಾಲೀಕರನ್ನು ಹೊಗಳುತ್ತ ಹಲವು ದಶಕಗಳಿಂದ 'ಅನ್ನ ದಾಸೋಹ' ಮಾಡುತ್ತ ಬಂದಿದ್ದಾರೆ ಎಂದು ಶ್ಲಾಘಿಸಿದ್ದನ್ನು ಗಮನಿಸಿದರೆ ಖಾನಾವಳಿಯಲ್ಲಿ ಉಚಿತವಾಗಿ ಭೋಜನ ನೀಡುತ್ತಿದ್ದಾರೇನೋ ಎನಿಸಿತು.

—ರಾಜೀವ್ ಎನ್. ಮಾಗಲ್

## ಹೊಸತನದ ಥಟ್ ಅಂತ ಹೇಳಿ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಎರಡು ದಶಕಗಳಿಂದ ಪ್ರಸಾರವಾಗುತ್ತಿರುವುದು ಹೆಮ್ಮೆಯ ಸಂಗತಿ. ಇಷ್ಟು ದೀರ್ಘ ಕಾಲವಾದರೂ ತನ್ನ ಜನಪ್ರಿಯತೆಯನ್ನು ಅದು ಕಳೆದುಕೊಂಡಿಲ್ಲ. ಈಗ ಪ್ರತಿದಿನ ಪ್ರಸಿದ್ಧ ವ್ಯಕ್ತಿ ಒಬ್ಬರನ್ನು ಕರೆಸಿ ಕಾರ್ಯಕ್ರಮವನ್ನು ನಡೆಸಿ ಕೊಡುತ್ತಿರುವುದು ಖುಷಿಯ ವಿಷಯ. ಈಚೆಗೆ ಬಾಬು ಹಿರಣ್ಣಯ್ಯ ಭಾಗವಹಿಸಿದ್ದ ಸಂಚಿಕೆ ಬಹಳ ಮೆಚ್ಚುಗೆಯಾಯ್ತು. ಮಾಸ್ಟರ್ ಹಿರಣ್ಣಯ್ಯ ಅವರ ಬಗ್ಗೆ ಅನೇಕ ವಿಷಯಗಳನ್ನು ತಿಳಿಸಿದರು. ಎರಡು ಶಿಲೆಗಳ ಬಗ್ಗೆ ಹೇಳಿದ ಕತೆ ಅರ್ಥಪೂರ್ಣವಾಗಿತ್ತು.

—ಕೆ.ಎಸ್. ಸವಿತ, ಬೆಂಗಳೂರು

## ಭರವಸೆಯ ಕಥೆ

ಅದೇ ಕಥೆಯ ಧಾರಾವಾಹಿಗಳನ್ನು ನೋಡಿ ಬೇಸತ್ತ ನಮಗೆ ಕಲರ್ಸ್ ಕನ್ನಡದ 'ದೊರೆಸಾನಿ' ಭರವಸೆಯನ್ನು ಹುಟ್ಟಿಸುತ್ತಿದೆ. ಬರೀ ಕಲಹಕ್ಕೆ ಮಾತ್ರ ಸೀಮಿತವಾಗಿಲ್ಲ. ಸನ್ನಿವೇಶವನ್ನು ಅರ್ಥಮಾಡಿಕೊಂಡು ಮತ್ತೊಬ್ಬರ ಮನಸ್ಥಿತಿಗೆ ಸ್ಪಂದಿಸಿ ವಾತಾವರಣ ತಿಳಿಗೊಳಿಸುವ ರೀತಿ, ನವಿರು ಹಾಸ್ಯ, ಲವಲವಿಕೆಯಿಂದ ಮನ ಮುಟ್ಟುವಂತೆ ಚಿತ್ರಿಸಲಾಗಿದೆ. ನಾಯಕಿ, ನಾಯಕ ಮತ್ತು ಇತರ ಪಾತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ.

—ಮಾಲತಿ ವೈದ್ಯನಾಥ್

## ಕುತೂಹಲವೇ ಇಲ್ಲ!

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದಲ್ಲಿ ಪರ್ಫೆಕ್ಟ್ ಎಂದು ಬೀಗುವ ಎ.ಜೆ. ಮಾಡಿದ್ದೆಲ್ಲ ಎಡವಟ್ಟು ಎಂದುಕೊಂಡಿರುವ ಲೀಲಾ ವರ್ತನೆಯಲ್ಲಿಯೂ ಬಾಲಿಶತನ ಎದ್ದು ಕಾಣುತ್ತದೆ. ಮನೆಯ ವಾತಾವರಣವನ್ನು ಸರಿಗೊಳಿಸದೆ ಸುಮ್ಮನೆ ಪರ್ಫೆಕ್ಟ್ ಎಂದು ಎ.ಜೆ. ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆ.

ಲೀಲಾಳ ವರ್ತನೆಯನ್ನು ಆ ಶಿವನೇ ಮೆಚ್ಚಬೇಕು! ಇಲ್ಲಿನ ಅಸಂಬದ್ಧ ಪಾತ್ರಗಳ ಮಾತು– ಕತೆ ಧಾರಾವಾಹಿಯ ಹಂದರಕ್ಕೆ ಪೂರಕವಾಗೇನೂ ಇಲ್ಲ. ಬೇಕಿಲ್ಲದ ವಿಷಯಗಳು ತುಂಬಿ ತುಳುಕಿವೆ. ಹಾಗಾಗಿ ಧಾರಾವಾಹಿ ಯಾವ ಕುತೂಹಲವನ್ನು ಉಳಿಸಿಕೊಂಡಿಲ್ಲ ಎಂದೆನಿಸುತ್ತದೆ.

—ಶಂಕರೇಗೌಡ ತುಂಬಕೆರೆ, ಮಂಡ್ಯ